


## ಅಯ್ಯಪ್ಪಯ್ಯ ಹುಡಾ

ಕಲೆ: ಎಸ್.ವಿ. ಹೂಗಾರ್




# ಜಗದಾಟ ಮಾಟ ಮಾಯ

ಕೈ ಕಚ್ಚಬ್ಯಾಡ ಕಣ್ಮುಚ್ಚಬ್ಯಾಡ ನೀ ಹುಟ್ಟನಾಂಗ ಪ್ಯಾಲಿ
ನೀ ಹುಟ್ಟಿಬಂದ ಈ ಜಗದ ಬಳಗ ಎಲ್ಲವೂ ಖಾಲಿ ಖಾಲಿ

ಕಣ್ಣಿಗೆ ಕಂಡ ಬೆಳಕೆಲ್ಲ ಬಯಲು ಮೇಲೆಲ್ಲ ನೀಲಿಮುಗಿಲು
ಸುಳಿದಾಡುತ್ತೈತಿ ಅಲ್ಲೆಲ್ಲ ಇಲ್ಲಿ ಉಸಿರೆಂಬ ಗಾಳಿ ಸೊಲ್ಲು

ಕತ್ತಲರಾತ್ರಿ ಕಬ್ಬಕ್ಕಿ ಶಬ್ದ ನಿಬ್ಬೆರಗಿ ಬಂತು ಚಿತ್ರ
ನಂಬೀದ ಮನಕೆ ಇಂಬೆಲ್ಲಿ ಐತಿ ನಡೆಯುವುದೆಲ್ಲ ವಿಚಿತ್ರ

ಜನರನ್ನು ಕಳೆದು ಮನ ಮರುಳ ಮಾಡಿ ಮಾತಾಡುತ್ತಿದ್ದ ಮುದದಿ
ಮರುಗಳಿಗೆಯಲ್ಲಿ ಉರಿಯಾಯ್ತು ಕಾಯ ಕಣ್ಮುಸಿಗಿನಾಟ ಜಗದಿ

ಹುಟ್ಟಿದ ಮನುಜ ಸಾಯಲೇಬೇಕು ಆ ಗುಟ್ಟು ಗೊತ್ತು ಅರಿತವಗ
ಮೈಮರೆತು ಮಲಗಿನೀ ಇದ್ದ ಗಳಿಗೆ ಹೌಹಾರಿ ಹೋಯ್ತು ಬಳಗ

ನಿನ್ನೆ ಭೂಮಿ ಮೇಲೆ ಇದ್ದ ಮಂದಿ ಇಂದು ಇಲ್ಲವೇ ಇಲ್ಲ
ನಾಳೆ ಎಷ್ಟು ಜನರು ಹೋಗುತಿರುವರೋ ಯಾರು ತಾನೇ ಬಲ್ಲ

ಹುಟ್ಟುಸಾವಿನ ನಡುವೆ ಇಹುದು ಬೆತ್ತಲಾದ ಬದುಕು
ನಿತ್ಯದಲ್ಲಿ ಬರಿ ಖಾಲಿ ಖಾಲಿ ತುಂಬದಂತ ಸಂದೂಕು

ಹತ್ತುಹಲವು ಬಯಕೆಯೆಲ್ಲ ನೀರ ಮೇಲಿನ ಬುರುಡೆ
ನಿಲ್ಲದಂತ ಓಟದಾಟ ಸೋಲು ಕೊನೆಗೆ ಪಗಡೆ

ಯಾರೋ ಕೂಗಿ ಕರೆದಂತಾಯ್ತು ಕಣ್ಗೆ ಬಂತು ಮಂಪರು
ಏನೂ ಕಾಣದಂತಾಯ್ತು ನಿಂತಂತಾಯ್ತು ಉಸಿರು



Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68